5C.R.P.67

Form No.4 (Civil)
Deposition Sheets
(R.P.No.57)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 127/2022

ದಿನಾಂಕ ಃ 06.08.2025 ರಂದು ಪ್ರಮಾಣ ವಚನ ಬೋದಿಸಲಾಗಿದೆ.

ಸಿ. ಡಬ್ಲ್ಯೂ: 11 ಪಿ. ಡಬ್ಲ್ಯೂ: 12

| | |
|---|---|
| ಸಾಕ್ಷಿದಾರರ ಹೆಸರು | ಹರೀಶ್ ಕುಮಾರ್ |
| ತಂದೆಯ ಹೆಸರು | ಗೋವಿಂದಚಾರ್ |
| ವಯಸ್ಸು | 46 ವರ್ಷ |
| ಉದ್ಯೋಗ | ಚಿನ್ನ, ಬೆಳ್ಳಿ ಕೆಲಸ |
| ವಾಸ | ಕಿರುಗಾವಲು |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ನಾನು ಕಳೆದ 20 ರಿಂದ 25 ವರುಷಗಳಿಂದ ಕಿರುಗಾವಲಿನಲ್ಲಿ ವೆಂಕಟೇಶ್ವರ ಜ್ಯೂವೆಲರಿ works ಹೆಸರಿನಲ್ಲಿ ಚಿನ್ನ, ಬೆಳ್ಳಿ ಕೆಲಸ ಮಾಡುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯು ಪೊಲೀಸರ ಮುಖಾಂತರ ನನಗೆ ಗೊತ್ತಾಗಿರುತ್ತದೆ. ಪೊಲೀಸರು ಚಿನ್ನವನ್ನು ಪರಿಶೀಲಿಸಬೇಕೆಂದು ನನ್ನನ್ನು ಕರೆದಿದ್ದರು. ಆಗ ಆರೋಪಿಯನ್ನು ನಾನು ನೋಡಿರುತ್ತೇನೆ.
2. ಬೆಳಗ್ಗೆ 10.45 ಗಂಟೆ ಸಮಯದಲ್ಲಿ ಪೊಲೀಸರು ನನ್ನನ್ನು ಕಿರುಗಾಲಿನಲ್ಲಿ ಇರುವ ಆರೋಪಿಯ ಮನೆಗೆ ಕರೆಯಿಸಿಕೊಂಡಿದ್ದರು. ಸದರಿ ಸಮಯದಲ್ಲಿ ನಾನು ಹಾಗೂ ಇನ್ನೂ ಇಬ್ಬರು ಇದ್ದರು. ಪೊಲೀಸರು ಸಹ ಇದ್ದರು. ಪೊಲೀಸರು ಹೇಳಿದ್ದರಿಂದ ಸದರಿ ಮನೆಯು, ಆರೋಪಿಯ ಮನೆ ಎಂದು ಗೊತ್ತಾಗಿರುತ್ತದೆ. ಆರೋಪಿ ಚಂದ್ರುರವರು ನೀಡಿದ್ದ ಚಿನ್ನವನ್ನು ಪರಿಶೀಲನೆ ಮಾಡಿ ಕೊಡುವಂತೆ ಪೊಲೀಸರು ಅದನ್ನು ನನಗೆ ನೀಡಿದ್ದರು. ಸದರಿ ಚಿನ್ನವನ್ನು ಪರಿಶೀಲಿಸಿದಾಗ, 46 ಗ್ರಾಂಗಳ ಒಂದು ಚಿನ್ನದ ಸರ, ಒಂದು ಜೊತೆ ಚಿನ್ನದ ಮಾಟಿ, ಒಂದು ಚಿನ್ನದ ಉಂಗುರ ಮತ್ತು 5 ಗ್ರಾಂ ತೂಕದ ಒಂದು ಚಿನ್ನದ ಓಲೆ ಇದ್ದಿರುತ್ತದೆ. ಆರೋಪಿಯ ಮನೆಯಲ್ಲಿ ಒಂದು ಬೀರು ಇತ್ತು, ಅದರಿಂದ ಪೊಲೀಸರು ಸದರಿ ಚಿನ್ನವನ್ನು ವಶಪಡಿಸಿಕೊಂಡು ನೀಡಿದ್ದರು. ಬೇರೆ ಏನು ವಸ್ತುಗಳು ಇದ್ದವೆಂದು ಸ್ಥಳದಲ್ಲಿ ನಾನು ಗಮನಿಸಿಲ್ಲ. ಬೆಳಗ್ಗೆ 10.45 ರಿಂದ 12.00 ಗಂಟೆ ತನಕ ನಾನು ಆರೋಪಿಯ ಮನೆಯಲ್ಲಿ

ಇದ್ದೆನು. ಪೊಲೀಸರು ಲ್ಯಾಪ್ ಟ್ಯಾಪ್, ಪ್ರಿಂಟರ್ ತಂದಿದ್ದರು, ಅಲ್ಲಿ ಟೈಪ್ ಮಾಡಿಕೊಂಡು ನನ್ನ ಸಹಿಯನ್ನು ಸಹ ಪಡೆದಿದ್ದರು. ಸಾಕ್ಷಿಗೆ ನಿಪಿ.20 ಮಹಜರನ್ನು ತೋರಿಸಲಾಗಿ ಅದರಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ.20(ಸಿ) ಎಂದು ಗುರುತಿಸಲಾಯಿತು.

3. ಸದರಿ ಪರಿಶೀಲನೆ ಮಾಡಿದ ನಂತರ, ಸದರಿ ಚಿನ್ನದ ಒಡವೆಗಳು ಸುಕನ್ಯ ರವರಿಗೆ ಸೇರಿದ್ದೆಂದು ನನಗೆ ಹೇಳಿರುತ್ತಾರೆ. ಕೊಲೆ ಪ್ರಕರಣಕ್ಕೆ ಸಂಬಂಧಪಟ್ಟಂತೆ ಆರೋಪಿಯ ವಿರುದ್ದ ಪ್ರಕರಣ ದಾಖಲಾಗಿರುತ್ತದೆ. ಯಾರನ್ನು ಆರೋಪಿ ಕೊಲೆ ಮಾಡಿದ್ದಾನೆ ಎಂದು ನನಗೆ ಗೊತ್ತಿಲ್ಲ, ಕಾರಣ ಒಡವೆಗಳನ್ನು ಪರೀಕ್ಷೆ ಮಾಡುವುದು ಮಾತ್ರ ನನ್ನ ಜವಾಬ್ದಾರಿಯಾಗಿತ್ತು.

4. ನಿಪಿ. 20 ಮಹಜರ್ ಗೆ ನಾನು ಸಹಿ ಮಾಡಿದ ಕೂಡಲೇ ವಾಪಸ್ಸು ಹೋಗಿರುತ್ತೇನೆ.

5. ಸಾಕ್ಷಿಗೆ ಪೊಲೀಸ್ ನೋಟಿಸನ್ನು ತೋರಿಸಲಾಗಿ ಸದರಿ ನೋಟಿಸನ್ನು ಪೊಲೀಸರು ಠಾಣೆಗೆ ಕರೆಯಿಸಿ, ಅಲ್ಲಿ ನನ್ನ ಸಹಿ ಪಡೆದಿದ್ದರು ಎಂದು ನುಡಿಯುತ್ತಾರೆ. ಸದರಿ ಪೊಲೀಸ್ ನೋಟಿಸನ್ನು ನಿಪಿ.40 ಎಂದು, ಸಾಕ್ಷಿಯ ಸಹಿಯನ್ನು ನಿಪಿ.40(ಎ)ಎಂದು ಗುರುತಿಸಲಾಯಿತು.

6. ಸದರಿ ನಿಪಿ.40(ಎ) ಸಹಿಯನ್ನು ಸಂಜೆ 5.00 ಗಂಟೆ ಸಮಯದಲ್ಲಿ ಮಾಡಿರುತ್ತೇನೆ.

7. ನಾನು ತೂಕ ಮಾಡಿದ್ದ ಚಿನ್ನದ ಒಡವೆಗಳನ್ನು ನೋಡಿದರೆ ಗುರುತಿಸುತ್ತೇನೆ.

*(ಪಿಎಫ್ 31/2022 ರಲ್ಲಿ ಅಮಾನತ್ತು ಪಡಿಸಿಕೊಳ್ಳಲಾದ ಚಿನ್ನದ ಆಭರಣಗಳನ್ನು ದಿಃ 24.05.2022 ರಂದು ಶ್ರೀಮತಿ ಸುಕನ್ಯ ಹೆಚ್.ಬಿ. ಕೋಂ ಜಗದೀಶ ರವರ ಸುಪರ್ದಿಗೆ ನೀಡುವಂತೆ ಕಮಿಟಲ್ ನ್ಯಾಯಾಲಯದಲ್ಲಿ ಆದೇಶವಾಗಿತ್ತು. ಸದರಿ ಆದೇಶದಂತೆ ಆಭರಣಗಳನ್ನು ಶ್ರೀಮತಿ ಸುಕನ್ಯ ಹೆಚ್.ಬಿ. ಕೋಂ ಜಗದೀಶ ರವರ ಸುಪರ್ದಿಗೆ ನೀಡಲಾಗಿತ್ತು. ಸದರಿ ಸುಕನ್ಯ ಹೆಚ್.ಬಿ. ಕೋಂ ಜಗದೀಶ ರವರು ನ್ಯಾಯಲಯದ ಮುಂದೆ ಹಾಜರಿದ್ದು, ನ್ಯಾಯಾಲಯದ ಮುಂದೆ ಹಾಜರಿಸಿರುತ್ತಾರೆ. ಸದರಿ ಒಡವೆಗಳನ್ನು ಈಗಾಗಲೇ ಮುಮಾ.1 ರಿಂದ 4 ಎಂದು ಗುರುತಿಸಲಾಗಿರುತ್ತದೆ).*

8. ಸಾಕ್ಷಿಯು ಮು.ಮಾ .1 ರಿಂದ 4 ಒಡವೆಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಗೆ 2 ದಾಖಲಾತಿಗಳನ್ನು ತೋರಿಸಲಾಗಿ ಸದರಿ ದಾಖಲಾತಿಗಳನ್ನು ತಾನು ಪೊಲೀಸರಿಗೆ ನೀಡಿದ್ದೇನೆ ಎಂದು ಹೇಳಿರುತ್ತಾರೆ. ಸದರಿ ದಾಖಲಾತಿಗಳನ್ನು ನಿಪಿ.41 ಮತ್ತು 42 ಎಂದು ಗುರುತಿಸಲಾಯಿತು.

9. ಸಾಕ್ಷಿಗೆ ನಿಪಿ.23 ಮತ್ತು 24 ಫೋಟೋಗಳನ್ನು ತೋರಿಸಲಾಗಿ ಸದರಿ ಫೋಟೋ ದಲ್ಲಿ ತಾನು ಇದ್ದೇನೆ ಗುರುತಿಸಿರುತ್ತಾರೆ.
10. ಸದರಿ ನಿಪಿ.23 ಮತ್ತು 24 ಫೋಟೋಗಳನ್ನು ಸದರಿ ಒಡವೆ ಪರಿಶೀಲನೆ ಕಾಲದಲ್ಲಿ ತೆಗೆಯಲಾಗಿದೆ ಎಂದು ಗುರುತಿಸಿರುತ್ತಾರೆ. ಮುದ್ದೆಮಾಲು 5 ರಿಂದ 9 ವಸ್ತುಗಳನ್ನು ನಾನು ಗಮನಿಸಿಲ್ಲ, ಕಾರಣ, ಸದರಿ ಒಡವೆಗಳನ್ನು ಪರಿಶೀಲಿಸುವುದು ಮಾತ್ರ ನನ್ನ ಜವಾಬ್ದಾರಿಯಾಗಿತ್ತು. ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಸದರಿ ವಿಚಾರಗಳು 2022 ನೇ ಸಾಲಿನಲ್ಲಿ ಆಗಿರುತ್ತವೆ, ದಿನಾಂಕ ಖಚಿತವಾಗಿ ನೆನಪಿಲ್ಲ.

(ಈ ಹಂತದಲ್ಲಿ ಮಾನ್ಯ ಸಾ.ಅ ರವರು ಸಾಕ್ಷಿ ಹೇಳಿಕೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದಾರೆ ಎಂದು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಗಿದೆ).

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

11. ಆರೋಪಿಯ ಮನೆಗೆ ಹೋಗುವ ಮೊದಲು ಪೊಲೀಸ್ ಠಾಣೆಯಲ್ಲಿ ಪೊಲೀಸರು ನಿಪಿ.40 ರಂತೆ ನನಗೆ ನೋಟಿಸು ನೀಡಿದ್ದರು ಎಂದರೆ ಸರಿ. ನಂತರದಲ್ಲಿ ಸದರಿ ಪ್ರಾಸಾ.9 ಮತ್ತು 10 ರವರೊಂದಿಗೆ ನನ್ನನ್ನು, ಆರೋಪಿಯು ತೋರಿಸಿದಂತೆ ಅವರ ಮನೆಗೆ ನಮ್ಮನ್ನು ಕರೆದುಕೊಂಡು ಹೋದರು ಎಂದರೆ ಸರಿ. ಆರೋಪಿಯು ತನ್ನ ಮನೆಯ ಮುಂಭಾಗದಲ್ಲಿ ಇರುವ ಜಗುಲಿಯ ಬಳಿ ನಿಂತುಕೊಂಡು, ಸದರಿ ಸ್ಥಳದಲ್ಲಿ ಜಗದೀಶ ರವರ ತಾಯಿರವರಿಗೆ ಕುಡಿಯಲು ಹಾಲು ಕೊಡುವುದಾಗಿ ಹೇಳಿ ಹಾಲಿನಲ್ಲಿ ನಿದ್ರೆ ಮಾತ್ರೆಗಳನ್ನು ಹಾಕಿ ಹಾಲು ಕುಡಿಯಲು ಕೊಟ್ಟು ಆಕೆ ಪ್ರಜ್ಞೆ ತಪ್ಪಿ ಹೋದ ಸ್ಥಳ ಎಂದು ಸ್ಥಳವನ್ನು ತೋರಿಸಿದ್ದರು ಎಂದರೆ ಸಾಕ್ಷಿಯು, ನಾನು ಗಮನಿಸಿಲ್ಲ ಎಂದು ಹೇಳುತ್ತಾರೆ. ಸದರಿ ಜಗದೀಶ ರವರ ತಾಯಿ ಪ್ರಜ್ಞೆ ತಪ್ಪಿದ ನಂತರ ಆಕೆಯ ಮೈ ಮೇಲೆ ಇದ್ದ ಒಡವೆಗಳನ್ನು ತಾನು ಕಳ್ಳತನ ಮಾಡಿದನೆಂದು ಆರೋಪಿ ಹೇಳಿದರು ಎಂದರೆ ನನಗೆ ಗೊತ್ತಿಲ್ಲ.
12. ನಂತರ ಆರೋಪಿಯು ತನ್ನ ಮನಯ ಕೊಠಡಿಯ ಒಳಗೆ ಹೋಗಿ ಮೇಜಿನ ಮೇಲೆ ಇದ್ದ ಮುದ್ದೆ ಮಾಲು 5 ರಿಂದ 9 ವಸ್ತುಗಳನ್ನು ತೋರಿಸಿದ್ದರು ಎಂದರೆ ಸಾಕ್ಷಿಯು ಅವುಗಳನ್ನು ನಾನು ಗಮನಿಸಿಲ್ಲ ಎಂದು ಹೇಳುತ್ತಾರೆ. ಮುದ್ದೆ ಮಾಲು 6 ಲ್ಲಿ ಇರುವ ಮಾತ್ರೆಗಳನ್ನು ಪುಡಿ ಮಾಡಿ ಹಾಲಿನಲ್ಲಿ ಬೆರೆಸಿ, ಮುಮಾ.7 ಲೋಟದಲ್ಲಿ ಕುಡಿಯಲು ಜಗದೀಶ ರವರಿಗೆ ತಾಯಿಗೆ ನೀಡಿದ್ದೆನು ಎಂದು ಆರೋಪಿ ಹೇಳಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ

ಎಂದು ಹೇಳುತ್ತಾರೆ. ಸದರಿ ಮಾತ್ರೆಗಳನ್ನು ಪುಡಿ ಮಾಡಲು, ಮುಮಾ.5 ಮತ್ತು ಮುಮಾ.8 ನ್ನು ಬಳಸಿದ್ದೆನು ಎಂದು ಆರೋಪಿಯು ಹೇಳಿದರು ಎಂದರೆ ಸಾಕ್ಷಿಯು ನಾನು ಗಮನಿಸಿಲ್ಲ ಎಂದು ಹೇಳುತ್ತಾರೆ.

13. ಆರೋಪಿಯು, ಬೀರುವಿನಲ್ಲಿ ಇದ್ದ ನಿಪಿ.25 ರಿಂದ 35, 11 prescription ಚೀಟಿಗಳನ್ನು ಪೊಲೀಸರ ಮುಂದೆ ಹಾಜರು ಪಡಿಸಿದ್ದರು ಎಂದರೆ ಸಾಕ್ಷಿಯು ನಾನು ಗಮನಿಸಿಲ್ಲ ಎಂದು ಹೇಳುತ್ತಾರೆ. ಆರೋಪಿಯು, ಬೀರುವಿನಲ್ಲಿ ಇರಿಸಿದ್ದ ಮುದ್ದೇಮಾಲು.9 ರಲ್ಲಿದ್ದ ಮುದ್ದೇಮಾಲು.1 ರಿಂದ 4 ಆಭರಣಗಳನ್ನು ತೆಗೆದು ನೀಡಿದ್ದರು ಎಂದರೆ ಸರಿ. ಆ ಸಂದರ್ಭದಲ್ಲಿ, ಎಲ್ಲಾ ಆಭರಣಳು ಸಹ ಜಗದೀಶ ರವರ ತಾಯಿ ಶಾಂತಮ್ಮ ರವರ ಮೈ ಮೇಲೆ ಇದ್ದ ಆಭರಣಗಳು ಎಂದು ನನಗೆ ಗೊತ್ತಾಯಿತು ಎಂದರೆ ಸಾಕ್ಷಿಯು ಪೊಲೀಸರು ಹೇಳಿದ್ದರಿಂದ ನನಗೆ ಗೊತ್ತಾಯಿತು ಎಂದು ಹೇಳುತ್ತಾರೆ. ಅದೇ ದಿನ ಸಂಜೆ ಪೊಲೀಸ್ ಠಾಣೆಯಲ್ಲಿ ಸದರಿ ಮುದ್ದೇಮಾಲು. 1 ರಿಂದ 9 ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡ ಬಗ್ಗೆ ನಾನು ಹೇಳಿಕೆಯನ್ನು ಸಹ ನೀಡಿದ್ದೇನೆ ಎಂದರೆ ಸಾಕ್ಷಿಯು, ನಾನು ಅವುಗಳನ್ನು ಗಮನಿಸಿಲ್ಲ, ನೆನಪಿಲ್ಲ ಎಂದು ಹೇಳುತ್ತಾರೆ. ಸದರಿ ದಿನಾಂಕವು ದಿಃ 26.04.2022 ರಂದು ಆಗಿತ್ತು ಎಂದರೆ ಸಾಕ್ಷಿಯು ಏಪ್ರಿಲ್ ತಿಂಗಳಲ್ಲಿ ಅಗಿತ್ತು ಎಂದು ಹೇಳುತ್ತಾರೆ.

14. ಸಾಕ್ಷಿಗೆ ಹೇಳಿಕೆಯ ''ಆರೋಪಿಯು ...................................... ಕ್ರಮ ಸಂಖ್ಯೆಃ 5 ಎಂದು ಗುರುತಿಸಲಾಯಿತು'' ಎಂಬ ಭಾಗವನ್ನು ಅಭಿಯೋಜಕರು ಓದಿಹೇಳಿದ್ದು, ಸದರಿ ಹೇಳಿಕೆಯ ಭಾಗವನ್ನು ನಿರಾಕರಿಸಿದ್ದರಿಂದ, ಸದರಿ ಹೇಳಿಕೆಯ ಭಾಗವನ್ನು ನಿಪಿ.43 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಎನ್ ಕೆ ಎಸ್ ವಕೀಲರಿಂದಃ**

15. ನಾನು Appraiser ಆಗಿ ಒಂದು ವರುಷ ಕೆಲಸ ಮಾಡಿದ್ದೆನು ನಂತರ ಸದರಿ ಕೆಲಸವನ್ನು ಬಿಟ್ಟಿದ್ದೆನು. ಘಟನಾ ಸ್ಥಳಕ್ಕೆ ಬರುವಂತೆ ಪೊಲೀಸರು ನನಗೆ ತಿಳಿಸಿರುತ್ತಾರೆ. ಘಟನಾ ಸ್ಥಳಕ್ಕೆ ನಾವು ಹೋದ ನಂತರ ಆರೋಪಿಯು ಜೀಪ್ ನಿಂದ ಇಳಿದರೇ ಎಂದರೆ ಸಾಕ್ಷಿಯು ಹೌದು ಎಂದು ಹೇಳುತ್ತಾರೆ.

16. ಸದರಿ ಘಟನಾ ಸ್ಥಳಕ್ಕೆ ಹೋಗುವ ಮೊದಲು ನಾನು ನನ್ನ ಅಂಗಡಿಯಲ್ಲಿ ಇದ್ದೆನು. ನಾನು ಆರೋಪಿಯ ಮನೆಗೆ ನಡೆದುಕೊಂಡು ಹೋಗಿದ್ದೆನು. ಪೊಲೀಸರು ಮಾಡಿಕೊಂಡ ಬರವಣಿಗೆಯನ್ನು ಓದಿ ಹೇಳಿದ್ದಾರಾ ಎಂದರೆ ಸಾಕ್ಷಿಯು, ನಾನು ಒಡವೆಗಳನ್ನು ಪರೀಕ್ಷೆ ಮಾಡಿರುವ ವಿಚಾರಗಳನ್ನು

ಓದಿ ಹೇಳಿರುತ್ತಾರೆ ಎಂದು ಹೇಳುತ್ತಾರೆ. ಘಟನಾ ಸ್ಥಳದಲ್ಲಿ ಮುದ್ದೆಮಾಲು.1 ರಿಂದ 4 ನ್ನು ಪೊಲೀಸರು ತಂದು ಕೊಟ್ಟರೇ ಎಂದರೆ ಸಾಕ್ಷಿಯು, ಹೌದು ಎಂದು ಹೇಳುತ್ತಾರೆ. ಸದರಿ ಚಿನ್ನದ ಒಡವೆಗಳನ್ನು ಸ್ಥಳದಲ್ಲಿ ಪರಿಶೀಲಿಸಲು ಸುಮಾರು ಅರ್ಧ -ಮುಕ್ಕಾಲು ಗಂಟೆ ಆಗಿರುತ್ತದೆ.

**ಮರು ವಿಚಾರಣೆಃ ಏನು ಇಲ್ಲ**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶಿವಪ್ರಸಾದ್ ಕೆ.ಬಿ.)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.